ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ವಾದಿ ಪರ ವಕೀಲರಿಂದಃ-

ನನ್ನ ಪೂರ್ಣ ಹೆಸರು ಉಮಾಶೇಖರ್. ನನ್ನ ಸಾಕ್ಷಿ ಪ್ರಮಾಣ ಪತ್ರ ಪುಟ್ಟಸ್ವಾಮಿ ಮಗ ಉಮಾಶೇಖರ್ ಎಂದು ನಮೂದು ಇರುತ್ತದೆ ಎಂದರೆ ಸರಿ. ಉಮಾಶೇಖರ್ ಅಲಿಯಾಸ್ ಶೇಖರ್ ಎಂದರೆ ನಾನೇ. 1ನೇ ಪ್ರತಿವಾದಿಯ ಗಂಡ ಎಳನೀರು ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ಎಳನೀರು ವ್ಯಾಪಾರ ಮಾಡಲು 1ನೇ ಪ್ರತಿವಾದಿಯ ಗಂಡ ಲಗೇಜ್ ಆಟೋ ಇಟ್ಟುಕೊಂಡಿದ್ದರು ಎಂದರೆ ಸರಿ. ಬ್ಯಾಂಕಿನಲ್ಲಿ ಸಾಲ ಮಾಡಿ ಲಗೇಜ್ ಟೆಂಪೋ ತೆಗೆದುಕೊಂಡಿದ್ದರು ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ಅಕ್ಕನ ಗಂಡ ಬೇರೆ ಬೇರೆ ಕಡೆ ಸಾಲ ಸಹ ತೆಗೆದುಕೊಂಡಿದ್ದರು ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ,

ದಿನಾಂಕ 17.06.2011 ರಂದು 1ನೇ ಪ್ರತಿವಾದಿ ಮತ್ತು ಅವರ ಗಂಡ ಬಿ. ರಮೇಶ್ ರವರು ವಾದಿಗೆ ಕರಾರು ಪತ್ರವನು ಬರೆದುಕೊಟ್ಟಿದ್ದಾರೆ ಎಂದು ಕರಾರು ಪತ್ರ ತೋರಿಸಿ ಪ್ರಶ್ನಿಸಿದಾಗ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನನ್ನ ಅಕ್ಕನ ಹೆಸರಿಗೆ ಜಮೀನು ಮಾಡಿಸುತ್ತೇನೆ ಎಂದು ಬೇರೆ ಪತ್ರಕ್ಕೆ ಸಹಿ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಿನಾಂಕ 17.06.2011ರ ಕರಾರು ಪತ್ರದ ಪ್ರಕಾರ ದಾವಾ ಆಸ್ತಿಯು 10 ಲಕ್ಷ ಹಣಕ್ಕೆ ನಿಗಧಿಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ವಾದಿಯಿಂದ ಕರಾರು ಪತ್ರದನ್ವಯ 5 ಲಕ್ಷ ಹಣವನ್ನು 1ನೇ ಪ್ರತಿವಾದಿ ಮತ್ತು ಅವರ ಗಂಡ ಸಾಕ್ಷಿಗಳ ಸಮಕ್ಷಮ ಮುಂಗಡವಾಗಿ ಪಡೆದುಕೊಂಡಿದ್ದರು

ಎಂದರೆ ನನಗೆ ಗೊತ್ತಿಲ್ಲ ಅವರು ಯಾವುದೇ ಹಣ ಕೊಟ್ಟಿಲ್ಲ. ಉಳಿದ ಹಣವನ್ನು ತೆಗೆದುಕೊಂಡು ಕ್ರಯಪತ್ರವನ್ನು ಬರೆದುಕೊಡಿ ಎಂದು ವಾದಿ ರವರು 1ನೇ ಪ್ರತಿವಾದಿ ಮತ್ತು ಆಕೆಯ ಗಂಡನಿಗೆ ಕೇಳಿದ್ದಾರೆ ಎಂದರೆ ಸರಿಯಲ್ಲ. ದಿನಾಂಕ 12.12.2023ರಂದು ವಾದಿರವರು 1ನೇ ಪ್ರತಿವಾದಿ ಬಾಕಿ ಹಣ ಪಡೆದುಕೊಂಡು ಕ್ರಯ ಪತ್ರ ಬರೆದುಕೊಡಿ ಎಂದು ನೋಟಿಸುನೀಡಿದ್ದರು ಎಂದರೆ ಸಾಕ್ಷಿ ನೋಟಿಸು ಬಂದ ನಂತರವೇ ನನ್ನ ಅಕ್ಕನ ಗಂಡ ಈ ರೀತಿ ಮಾಡಡಿರುತ್ತಾರೆ ಎಂದು ತಿಳಿದುಬಂದಿರುತ್ತದೆ. ನೋಟಿಸು ಬಂದರೂ ಸಹ ಕ್ರಯ ಪತ್ರ ಬರೆದುಕೊಡಲು ಬಂದಿಲ್ಲ ಎಂದರೆ ಸಾಕ್ಷಿ ನನ್ನ ಅಕ್ಕ ಯಾವುದೇ ಹಣ ಪಡೆದುಕೊಂಡಿಲ್ಲ, ಕೋಟಿ ಬೆಲೆ ಬಾಳುತ್ತದೆ ಹೇಗೆ 10 ಲಕ್ಷಕ್ಕೆ ಕರಾರು ಪತ್ರ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ಕರಾರು ಪತ್ರವು ವಾದಿ, 1ನೇ ಪ್ರತಿವಾದಿ ಮತ್ತು ಆಕೆಯ ಗಂಡನ ನಡುವೆ ನಡೆದಿರುವುದರಿಂದ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂಂದರೆ ಸಾಕ್ಷಿ ನನ್ನ ಅಕ್ಕನಿಗೂ ಸಹ ಗೊತ್ತಿರಲ್ಲಿ ನೋಟಿಸು ಬಂದ ನಂತರ ನಮಗಿಬ್ಬರಿಗೂ ತಿಳಿದುಂದಿರುತ್ತದೆ ಎಂದು ನುಡಿಯಿುತ್ತಾರೆ. ಕರಾರು ಪತ್ರವಾಗದಾಗ ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ. ಕರಾರು ಪತ್ರಕ್ಕೆ ಸಾಕ್ಷಿದಾರನಾಗಿ ನಾನು ಸಹಿ ಮಾಡಿಲ್ಲ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳ ನಡುವೆ ಆದ ಕರಾರು ಪತ್ರದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ, ನನ್ನ ಬಾವ ಕುಡಿಯುತ್ತಿದ್ದರಿಂದ ಅದನ್ನು ದುರುಪಯೋಗಪಡಿಸಿಕೊಂಡು ಈ ರೀತಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಕರಾರು ಪತ್ರವಾಗದಾಗ 1ನೇ ಪ್ರತಿವಾದಿ ಆಕೆಯ ಗಂಡ ಸಬ್ ರಿಜಿಸ್ಟ್ರರ್ ಕಛೇರಿಗೆ ಬಂದಿದ್ದರು ಎಂದರೆ ಸಾಕ್ಷಿಯು ನನ್ನ ಅಕ್ಕನನ್ನ ಬಾವ ಮನೆ ಬರೆದುಕೊಡುತ್ತೇನೆ ಎಂದು ಹೇಳಿ ಕರೆದುಕೊಂಡು ಹೋಗಿದ್ದರು ಎಂದು ನುಡಿಯುತ್ತಾರೆ. ಕರಾರು ಪತ್ರದ

ಒಕ್ಕಣೆಯನ್ನು ಸಾಕ್ಷಿಗಳ ಸಮಕ್ಷಮದಲ್ಲಿ ಓದಿ ಹೇಳಲಾಗಿದೆ ಎಂದರೆ ಸರಿಯಲ್ಲ. ಕ್ರಯದ ಕರಾರು ಪತ್ರದಲ್ಲಿ ಇರುವ ಫೋಟೋಗಳನ್ನು ತೋರಿಸಿ ಅದರಲ್ಲಿ ಇರುವ ಫೋಟೋ ಗಳು ನನ್ನ ಅಕ್ಕ ಮತ್ತು ಬಾವನದ್ದು ಎಂದರೆ ಸಾಕ್ಷಿ ದಾಖಲೆ ನೋಡಿ ಹೌದು ನನ್ನ ಅಕ್ಕನ ಹೆಸರಿಗೆ ಮನೆ ಬರೆಸಿಕೊಂಡುವಂತೆ ಕರೆದಕೊಂಡು ಹೋಗಿ ದಾಖಲೆ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ.

ನನ್ನ ಅಕ್ಕನ ಹೆಸರಿಗೆ ಆನಮಾನಹಳ್ಳಿ ಗ್ರಾಮದ ಸರ್ವೇ ನಂಬರ್ 33/ಎ 36 ಗುಂಟೆ 31/ಸಿ1 ಎಕರೆ 16 ಗುಂಟೆ ಇದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಆ ಜಮೀನಿನ ವಿರುದ್ಧ ಪಕ್ಕದ ಕೋರ್ಟ್ ನಲ್ಲಿ ಬೇರೆಯವರಿಗೂ ಕೇಸು ನಡೆಯುತ್ತಿದೆ ಎಂದು ನುಡಿಯುತ್ತಾರೆ. ನನ್ನ ಅಕ್ಕನವರು ಸದರಿ ಜಮೀನಿಗೆ 96 ಲಕ್ಷ ಹಣಕ್ಕೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯು ಬಿ ರಮೇಶ್ ಸ್ವಯಾರ್ಜಿತ ಸ್ವತ್ತಾಗಿರುವುದರಿಂದ 1ನೇ ಪ್ರತಿವಾದಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಕ್ಕನಿಗೆ ಬಾವ ಕಿರುಕುಳ ಕೊಡುತ್ತಿರುವ ಬಗ್ಗೆ ಬಹಳ ಸಲ ಪಂಚಾಯಿತಿ ನಡೆದಿರುತ್ತದೆ. 1ನೇ ಪ್ರತಿವಾದಿಗೆ ಕಿರುಕುಳ ಕೊಡುತ್ತಿರುವ ಬಗ್ಗೆ ಬಿ ರಮೇಶ್ ರವರ ಸಹೋದರರಿಗೆ ಮತ್ತು ತಾಯಿಗೆ ತಿಳಿಸಿರುತ್ತಾರೆ. ಬಾವನವರು ಅನುಮಾನಸ್ಪದವಾಗಿ ಧರ್ಮಸ್ಥಳದಲ್ಲಿ ತೀರಿಕೊಂಡಿದ್ದಾರೆ ಎಂಬ ಬಗ್ಗೆ ದೂರು ನೀಡಿರುತ್ತಾರೆ. ನನ್ನ ಬಾವನವರ ದುಶ್ಚಟಗಳನ್ನು ಬಳಸಿಕೊಂಡು ದಾಖಲೆಗಳನ್ನು ಸೃಷ್ಟಿಸಿರುದ್ದಾರೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅಕ್ಕನನ್ನು ನನ್ನ ಬಾವನಿಗೆ 2ನೇ ಮದುವೆ ಮಾಡಿಕೊಟ್ಟಿದ್ದು ಮೊದಲನೇ ಹೆಂಡತಿ ಸೂಸೈಡ್ ಮಾಡಿಕೊಂಡಿದ್ದು ಆಕೆಗೆ ಒಂದು ಗಂಡು

ಇದ್ದು ಈ ಎಲ್ಲಾ ವಿಚಾರಗಳನ್ನು ಮರೆಮಾಚಿ ಮೋಸದಿಂದ ಮದುವೆ ಮಾಡಿಕೊಂಡಿರುತ್ತಾರೆ. ದಾವಾ ಆಸ್ತಿ 2011ರಲ್ಲಿ 10 ಲಕ್ಷ ಬೆಳೆ ಬಾಳುತ್ತಿತ್ತು. 1ನೇ ಪ್ರತಿವಾದಿ ನನ್ನ ಅಕ್ಕನಾಗಿರುವ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆ ಪುರಸ್ಕೃತವಾದರೆ ನನ್ನ ಅಕ್ಕನಿಗೆ ಯಾವುದೆ ಅನಾನೂಕೂಲವಾಗುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.